# ಬಂಜೆತನ ನಿವಾರಣೆ ಸಾಧ್ಯ: ಕಾಮಿನಿರಾವ್

VK-2

ವಿಕ ಸುದ್ದಿಲೋಕ ಮೈಸೂರು



ಕೃತಕ ಗರ್ಭಧಾರಣೆ (ಐವಿಎಫ್- ಇನ್‌ವಿಟ್ರೋ ಫರ್ಟಿ ಲೈಜೇಷನ್) ಮೂಲಕ 30 ರಿಂದ 40 ವರ್ಷದ ಮಹಿಳೆಯರಲ್ಲಿ ಸುರಕ್ಷಿತ ತಾಯ್ತನ ಸಾಧ್ಯ ಎಂದು ಸ್ತ್ರೀ ರೋಗ ತಜ್ಞೆ ಡಾ.ಕಾಮಿನಿರಾವ್ ತಿಳಿಸಿದ್ದಾರೆ.

ಪ್ರಸ್ತುತ ವಿಳಂಬ ತಾಯ್ತನ ಸುರಕ್ಷಿತ ಮತ್ತು ಸರಳವೂ ಆಗಿದೆ. ವಿಳಂಬ ವಿವಾಹ, ಎರಡನೇ ವಿವಾಹ, ಜೀವನ ಶೈಲಿ ಇತ್ಯಾದಿ ಕಾರಣಗಳಿಗೆ ತಡವಾಗಿ ತಾಯಂದಿರಾಗುವವರ ಸಂಖ್ಯೆ ಹೆಚ್ಚಿದೆ. ಹಾಗಾಗಿ ಗರ್ಭ ಧರಿಸುವ ವಯಸ್ಸು ಮೀರಿದರೂ ಬಂಜೆತನ (ಇನ್‌ಫರ್ಟಿಲಿಟಿ) ನಿವಾರಣೆಗೆ ಐವಿಎಫ್ ಪರಿಣಾಮಕಾರಿ ಎಂದು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಐವಿಎಫ್ ಸಂಕೀರ್ಣ ಪ್ರಕ್ರಿಯೆ. ಆದರೂ ಯಶಸ್ಸು ಶೇ.50ರಷ್ಟಿದೆ. ಚಿಕಿತ್ಸಾ ವೆಚ್ಚ ದುಬಾರಿಯಾದರೂ ಸಂತಾನ ಸಮಸ್ಯೆ ನಿವಾರಣೆ ಈಗ ಸುಲಭ ಎಂದರು.

**ಯಶಸ್ವಿನಿಯಲ್ಲಿ ಅವಕಾಶ ಕಲ್ಪಿಸಿ:** ಬಡವರು ಹಾಗೂ ಗ್ರಾಮಾಂತರ ಭಾಗದವರಿಗೆ ಇದರ ಬಗ್ಗೆ ಅರಿವಿಲ್ಲ. ಹಾಗಾಗಿ ಕನಿಷ್ಠ ಸರಕಾರಿ ಆಸ್ಪತ್ರೆಗಳಲ್ಲಿ ಬಂಜೆತನ ನಿವಾರಣೆಗೆ ಚಿಕಿತ್ಸೆ ಒದಗಿಸಬೇಕಿದ್ದು, ಯಶಸ್ವಿನಿ ಯೋಜನೆಯಲ್ಲಿ ಅವಕಾಶ ಕಲ್ಪಿಸಬೇಕಿದೆ ಎಂದು ಹೇಳಿದರು. ಡಾ.ಶ್ರೀ ನಿವಾಸ್ ಹಾಜರಿದ್ದರು.